ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ
KARNATAKA STATE FINANCIAL CORPORATION
Established under the State Financial Corporations' Act, 1951
IS / ISO 9001:2008

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./
Ref. No. KSFC/H.O./ MD/ED-I/Secy/64/2017-18

ದಿನಾಂಕ :
Date 05-08-2017

ಸುತ್ತೋಲೆ ಸಂಖ್ಯೆ : 927

ವಿಷಯ : ಮಹಿಳಾ ಉದ್ಯಮಿಗಳಿಗೆ ಅನುಷ್ಠಾನ ಮಾಡುತ್ತಿರುವ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಾಲದ ಗರಿಷ್ಟ ಮಿತಿಯನ್ನು 50.00 ಲಕ್ಷ ರೂ.ಗಳಿಂದ 2.00 ಕೋಟಿ ರೂ.ಗಳಿಗೆ ಹೆಚ್ಚಿಸಿರುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ 920 ದಿನಾಂಕ 14.01.2016

-:o:0:o:-

ಮೆಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ಉದ್ದಿಮೆದಾರರಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ನೀಡಲಾಗುತ್ತಿರುವ ಸಾಲದ ಈಗಿರುವ 50.00 ಲಕ್ಷ ರೂ.ಗಳ ಗರಿಷ್ಟ ಮಿತಿಯನ್ನು 2.00 ಕೋಟಿ ರೂ.ಗಳವರೆಗೆ ಸರ್ಕಾರಿ ಆದೇಶ ಸಂಖ್ಯೆ ಮಮಇ 50 ಮಅನಿ 2017, ಬೆಂಗಳೂರು ದಿನಾಂಕ 12.05.2017ರ ಅನ್ವಯ ಹೆಚ್ಚಿಸಲಾಗಿದೆ. ಈ ಸರ್ಕಾರಿ ಆದೇಶದ ಅನುಷ್ಠಾನಕ್ಕೆ ದಿನಾಂಕ 26.07.2017ರಲ್ಲಿ ಯೋಜನಾ ಮಾರ್ಗಸೂಚಿಯನ್ನು ನೀಡಲಾಗಿದ್ದು, ಸದರಿ ಆದೇಶ ಹಾಗೂ ಮಾರ್ಗಸೂಚಿಗಳ ಪ್ರತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ. ಸದರಿ ಸರ್ಕಾರಿ ಆದೇಶ/ಮಾರ್ಗಸೂಚಿಗಳನ್ನು ಚಾಚೂ ತಪ್ಪದೆ ಪಾಲಿಸಲು ತಿಳಿಸಲಾಗಿದೆ. ಈ ಪರಿಷ್ಕೃತ ಆದೇಶದನ್ವಯ ಸಾಲದ ಗಾತ್ರವು 5.00 ಲಕ್ಷ ರೂ.ಗಳಿಂದ ಗರಿಷ್ಟ 2.00 ಕೋಟಿ ರೂ.ಗಳವರೆಗೆ ದಿನಾಂಕ 12.05.2017ರ ನಂತರ ಮಂಜೂರಾದ ಸಾಲಗಳಿಗೆ ಅನ್ವಯವಾಗುತ್ತದೆ.

ಸದರಿ ಯೋಜನೆಯಡಿ 2017-18ನೇ ಸಾಲಿಗೆ ಸಂಬಂಧಿಸಿದಂತೆ ತಾತ್ಕಾಲಿಕವಾಗಿ ಒಟ್ಟಾರೆ 200.00 ಕೋಟಿ ರೂ.ಗಳ ಸಾಲ ಮಂಜೂರಾತಿಯ ಗರಿಷ್ಟ ಮಿತಿಯ ಗುರಿಯನ್ನು ನಿಗಧಿಪಡಿಸಲಾಗಿದ್ದು, ಶಾಖಾವಾರು ಗರಿಷ್ಟ ಸಾಲ ಮಂಜೂರಾತಿಯ ಮಿತಿಯ ವಿವರವನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಶಾಖಾ ಕಛೇರಿಗಳು ನಿಗಧಿಪಡಿಸಿರುವ ಪರಿಮಿತಿಗೊಳಪಟ್ಟು ಸದರಿ ಯೋಜನೆಯಡಿ ಸಾಲ ಮಂಜೂರು ಮಾಡಲು ತಿಳಿಸಲಾಗಿದೆ. ಈ ವಿಷಯವನ್ನು ಕಛೇರಿಯ ಎಲ್ಲರ ಗಮನಕ್ಕೆ ತರುವುದು.

ಅಡಕ: ಮೇಲಿನಂತೆ.

ವ್ಯವಸ್ಥಾಪಕ ನಿರ್ದೇಶಕರು

ಎಲ್ಲಾ ಶಾಖಾ ವ್ಯವಸ್ಥಾಪಕರುಗಳಿಗೆ;
ಎಲ್ಲಾ ಅ.ಲೆ.ಪ. ವಿಭಾಗಗಳಿಗೆ;
ಪ್ರಧಾನ ಕಛೇರಿಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ;
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ;
ಗ್ರಾಂಥಾಲಯ

ಕಾನಿನಿ-I & II – ಮಾಹಿತಿಗಾಗಿ

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು-560 052
ದೂರವಾಣಿ ಸಂಖ್ಯೆ ಸಾಮಾನ್ಯ : 22263322 ಫ್ಯಾಕ್ಸ್ : 080-22250126 ಇ-ಮೇಲ್ : info@ksfc.in ವೆಬ್ : www.ksfc.in
**HEAD OFFICE :** KSFC Bhavan, No. 1/1, Thimmaiah Road, Near Cantonment Railway Station, Bangalore-560 052.
Telephone : Gen : 22263322, Fax : 080-22250126, e-mail : info@ksfc.in Website : www.ksfc.in

ಅನುಬಂಧ-1

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2017-18ನೇ ಸಾಲಿನ ಕೆ.ಎಸ್.ಎಫ್.ಸಿ.ಬಡ್ಡಿ ಸಹಾಯಧನ ಯೋಜನೆಯಡಿ ಸಾಲದ ಮೊತ್ತದ ಗರಿಷ್ಠ ಮಿತಿಯನ್ನು ರೂ.50.00ಲಕ್ಷಗಳಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಿ, ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರಿ ಆದೇಶ ಸಂಖ್ಯೆ: ಮಮಇ 64 ಮಅನಿ 2014, ಬೆಂಗಳೂರು, ದಿನಾಂಕ:05-11-2015
2. 2017-18ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-407.
3. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿಗಮ.ಇವರ ಏಕ ಕಡತ ಸಂಖ್ಯೆ: ಮಅನಿ/ಆ.ಘೋ/ಏಕ/2017-18/02./ಕೆ.ಎಸ್.ಎಫ್.ಸಿ.

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಲ ಪಡೆಯುವ ಮಹಿಳೆಯರಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಬಡ್ಡಿ ಸಹಾಯಧನ ಯೋಜನೆಯ ಆದೇಶ ಲಗತ್ತಿಸಿರುವ ಅನುಬಂಧದಲ್ಲಿನ ರೂಪುರೇಶಗಳೊಳಗೊಂಡಂತೆ 2015-16ನೇ ಸಾಲಿನಿಂದ ಜಾರಿಗೆ ತರಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ಮೇಲೆ ಓದಲಾದ ಕ್ರಮಾಂಕ(1)ರ ದಿನಾಂಕ: 05-11-2015ರ ಸರ್ಕಾರಿ ಆದೇಶದಲ್ಲಿ ನೀಡಲಾಗಿದೆ.

2017-18ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-407ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು "ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಪ್ರಸ್ತುತದಲ್ಲಿ ಶೇ.4ರ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು ರೂ.50.00ಲಕ್ಷಗಳಿಂದ ರೂ.2.00ಕೋಟಿಗಳಿಗೆ ಹೆಚ್ಚಿಸಲಾಗುವುದು" ಎಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಹೊಸ ಯೋಜನೆಯಡಿ ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ಘೋಷಿಸಿರುತ್ತಾರೆ.

ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಕೆ.ಎಸ್.ಎಫ್.ಸಿ.ಬಡ್ಡಿ ಸಹಾಯಧನ ಯೋಜನೆಯಡಿ ಸಾಲದ ಮೊತ್ತದ ಗರಿಷ್ಠ ಮಿತಿಯನ್ನು ರೂ.50.00ಲಕ್ಷಗಳಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಿ, ಮಹಿಳಾ ಉದ್ದಿಮೆದಾರರಿಗೆ ಶೇ.10ರಷ್ಟು ಬಡ್ಡಿ ಸಹಾಯಧನ ನೀಡಲು ಪರಿಷ್ಕೃತ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಕ್ರಮಾಂಕ(3)ರ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಇವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಮಮಇ 50 ಮಅನಿ 2017, ಬೆಂಗಳೂರು, ದಿನಾಂಕ:12-05-2017**

2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಣೆಯನ್ವಯ ಕೆ.ಎಸ್.ಎಫ್.ಸಿ.ಬಡ್ಡಿ ಸಹಾಯಧನ ಯೋಜನೆಯಡಿ ಸಾಲದ ಮೊತ್ತದ ಗರಿಷ್ಠ ಮಿತಿಯನ್ನು ರೂ.50.00ಲಕ್ಷಗಳಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಿ, ಮಹಿಳಾ ಉದ್ದಿಮೆದಾರರಿಗೆ/ಫಲಾನುಭವಿಗೆ ಶೇ.4ರ ಬಡ್ಡಿ ಪಾವತಿ ಯೋಜನೆಯೊಂದಿಗೆ ಶೇ.10ರಷ್ಟು ಬಡ್ಡಿ ಸಹಾಯಧನ ನೀಡಲು ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳಿಗೆ ಉದ್ಯೋಗ ಚಟುವಟಿಕೆಗಳಲ್ಲಿ ಭಾಗವಹಿಸಿ ಸಾಲ ಪಡೆಯುವ ಮಹಿಳೆಯರಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಬಡ್ಡಿ ಸಹಾಯಧನ ಯೋಜನೆಯನ್ನು ಯೋಜನಾ ಮಾರ್ಗಸೂಚಿಯನ್ವಯ ಹಾಗೂ ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸಲು ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಈ ಯೋಜನೆಗಾಗಿ ತಗಲುವ ವೆಚ್ಚವನ್ನು 2017-18ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2235-02-001-0-10 (ಯೋಜನೆ)ಯಡಿಯಲ್ಲಿ ಒದಗಿಸಿರುವ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:ಆಇ 228 ವೆಚ್ಚ-10 2017, ದಿನಾಂಕ:22.4.2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ಯೋಜನೆ ಇಲಾಖೆಯ ಟಿಪ್ಪಣಿ ಸಂಖ್ಯೆ:ಯೋಇ 73 ಐಎಂಎಂ 2017, ದಿನಾಂಕ:28.4.2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಯಲಕ್ಷ್ಮಿ) 12/5/2017
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

<u>ಇವರಿಗೆ:</u>

1. ಮಹಾಲೇಖಪಾಲರು, (ಜಿ & ಎಸ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇಆರ್ಎಸ್ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಶಾಖಾಧಿಕಾರಿ, ಸ್ತ್ರೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಜಿ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

ಸರ್ಕಾರಿಆದೇಶ ಸಂಖ್ಯೆ: ಮಮಇ 50 ಮಅನಿ 2017, ದಿನಾಂಕ: 12.05.2017ಕ್ಕೆ ಮಾರ್ಗಸೂಚಿ:-

# ಬಡ್ಡಿ ಸಹಾಯಧನ ಯೋಜನೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ರಾಜ್ಯದಲ್ಲಿ ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಶೇ 13% ರಿಂದ 14% ರಂತೆ ಬಡ್ಡಿಯನ್ನು ವಿಧಿಸುತ್ತಿರುವುದಾಗಿ ತಿಳಿಸುತ್ತಾ ಈ ಉದ್ದಿಮೆದಾರರಿಗೆ ಹೆಚ್ಚಿನ ಆದ್ಯತೆ ಹಾಗೂ ಉತ್ತೇಜನ ನೀಡುವ ಸಲುವಾಗಿ ಬಡ್ಡಿಯಲ್ಲಿ ರಿಯಾಯಿತಿಯನ್ನು ನೀಡಲು ಸರ್ಕಾರದ ಯೋಜನೆಯಲ್ಲಿ ಉದ್ದೇಶಿಸಲಾಗಿದೆ.

ಈ ಯೋಜನೆಯಡಿಯಲ್ಲಿ ಕನಿಷ್ಠ ರೂ.5.00 ಲಕ್ಷದಿಂದ ಗರಿಷ್ಠ ರೂ.2.00 ಕೋಟಿಗಳ ವರೆಗೆ ಸಾಲವನ್ನು ಕಲ್ಪಿಸಲಾಗುತ್ತದೆ. ಬಡ್ಡಿ ಸಹಾಯಧನ ಯೋಜನೆಯ ರೂಪು ರೇಷೆಗಳು ಈ ಕೆಳಕಂಡಂತಿದೆ.

1. **ಉದ್ದೇಶ** : ಎಂ.ಎಸ್.ಎಂ.ಇ.ಡಿ. ಕಾಯ್ದೆ 2006ರಲ್ಲಿ ಸೂಚಿಸಿದಂತೆ ಅತಿ ಸಣ್ಣ, ಸಣ್ಣ / ಮಧ್ಯಮ ಗಾತ್ರದ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಮಹಿಳಾ ಉದ್ದಿಮೆದಾರರಿಗೆ ಉತ್ತೇಜನ ನೀಡುವ ಸಲುವಾಗಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ಘಟಕಗಳನ್ನು ಅಭಿವೃದ್ಧಿ ಪಡಿಸುವುದು. ಆದರೆ ಈಗಾಗಲೇ ಬ್ಯಾಂಕು/ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿರುವ ಘಟಕಗಳು ತಮ್ಮ ಸಾಲವನ್ನು ಈ ಯೋಜನೆಯಡಿ ವರ್ಗಾಯಿಸಲು ಬರುವುದಿಲ್ಲ.
2. **ನೋಡಲ್ಏಜೆನ್ಸಿ** :ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಈ ಯೋಜನೆಯನ್ನು ಕ.ರಾ.ಹ.ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಿದೆ.
3. **ಅರ್ಹತೆ** : ಈ ಕೆಳಗಿನಂತೆ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ:
   (i) ಮಹಿಳಾ ಉದ್ದಿಮೆದಾರರು ಮೊದಲನೇ ಬಾರಿ ಹೊಸ ಘಟಕವನ್ನು ಪ್ರಾರಂಭಿಸುವ ಸಲುವಾಗಿ;
   (ii) ಹಾಲಿ ಕಾರ್ಯನಿರ್ವಹಿಸುತ್ತಿರುವ ಅತಿ ಸಣ್ಣ / ಸಣ್ಣ / ಮಧ್ಯಮ ಕೈಗಾರಿಕೆಗಳು ಹಾಗೂ ಸೇವಾ ಘಟಕಗಳ ಉದ್ದಿಮೆದಾರರು ತಮ್ಮ ಘಟಕವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ / ಅಧುನೀಕರಣಗೊಳಿಸುವ ಸಲುವಾಗಿ.
   (iii) (1) ಈ ಘಟಕದ ಮಾಲೀಕರು ಮಹಿಳಾ ಅಭ್ಯರ್ಥಿಯಾಗಿರಬೇಕು.
   (2) ಪಾಲುದಾರಿಕೆಯ ಉದ್ಯಮ / ನಿಯಮಿತ ಕಂಪನಿಗಳಲ್ಲಿ ಮಹಿಳೆಯರ ಹೆಚ್ಚಿನ ಷೇರು / ನಿರ್ದೇಶಕರು ಶೇ 51% ಇರಬೇಕು.
4. **ಸಾಲದಗಾತ್ರ**: ಈ ಯೋಜನೆಯಡಿಯಲ್ಲಿ ಸಂಸ್ಥೆಯ "ಸಾಲ ನೀತಿ"ಯ ಅನುಸಾರ ಅರ್ಹ ಫಲಾನುಭವಿಗಳಿಗೆ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ಸಾಲ ಸೌಲಭ್ಯವನ್ನು ಕೆ.ಎಸ್.ಎಫ್.ಸಿ. ಮೂಲಕ ಕಲ್ಪಿಸಲಾಗುತ್ತದೆ. ವಿವಿಧ ಚಟುವಟಿಕೆಗಳಿಗೆ ಕನಿಷ್ಠ ರೂ.5.00 ಲಕ್ಷಗಳ ಸಾಲವನ್ನು ಈಗಾಗಲೇ ತೆಗೆದುಕೊಂಡ ಘಟಕಗಳ ವಿಸ್ತರಣೆ / ಅಧುನಿಕರಣಕ್ಕಾಗಿ ನೀಡಲಾಗುವುದು. ಆದರೆ ಉತ್ಪನ್ನ / ಸೇವೆ ಬದಲಾವಣೆಗೆ ಅನ್ವಯಿಸುವುದಿಲ್ಲ.
   ವೈದ್ಯರು ಹಾಗೂ ಪಶು ವೈದ್ಯರು ಇವರಿಗೆ ಕನಿಷ್ಠ 5.00 ಲಕ್ಷ ರೂ.ಗಳ ಸಾಲ.

**ಬಡ್ಡಿ ಸಹಾಯಧನ** :ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಲವನ್ನು ಮಂಜೂರು ಮಾಡುತ್ತದೆ. ಇದಕ್ಕೆ ಅವರ ನೀತಿ ನಿಬಂಧನೆಗಳಂತೆ ಬಡ್ಡಿಯನ್ನು ವಿಧಿಸುತ್ತಾರೆ. ಕ.ರಾ.ಹ.ಸಂಸ್ಥೆಯಿಂದ ಮಂಜೂರಾದ ಸಾಲದ ಮೇಲೆ ಶೇ.14ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಅದರಲ್ಲಿ ಶೇ.10 ರಷ್ಟು ಬಡ್ಡಿದರವನ್ನು ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ನೀಡಲಾಗುವುದು. ಫಲಾನುಭವಿಗಳು ವಾರ್ಷಿಕ ಶೇ.4 ರಷ್ಟು ಬಡ್ಡಿದರ

ಪಾವತಿಸಬೇಕಾಗಿರುತ್ತದೆ. ಪ್ರತಿ ತಿಂಗಳು ಕ.ರಾ.ಹ.ಸಂಸ್ಥೆಗೆ ಚಾಚೂ ತಪ್ಪದೆ ಮರುಪಾವತಿ ಮಾಡುವಂತಹವರು ಮಾತ್ರ ಈ ಬಡ್ಡಿ ಸಹಾಯಧನ ಪಡೆಯಲು ಅರ್ಹರಿರುತ್ತಾರೆ.

ಬಡ್ಡಿ ಸಹಾಯಧನದ ಅವಧಿ: ಫಲಾನುಭವಿಯು ಸಾಲದ ಮೊದಲ ಕಂತು ಪಡೆದ ದಿನಾಂಕದಿಂದ 5 ವರ್ಷಗಳವರೆಗೆ ಬಡ್ಡಿ ಸಹಾಯಧನಕ್ಕೆ ಅರ್ಹರಾಗಿರುತ್ತಾರೆ. ಘಟಕದ ವೆಚ್ಚಕ್ಕೆ ಅನುಸಾರವಾಗಿ ಕ.ರಾ.ಹ.ಸಂಸ್ಥೆಯವರು ಮರುಪಾವತಿಯ ಅವಧಿಯನ್ನು ವಿಸ್ತರಿಸುವ ಅಧಿಕಾರ ಹೊಂದಿರುತ್ತಾರೆ. ಬಡ್ಡಿ ಸಹಾಯಧನ ಯೋಜನೆಯು 5 ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ.

ಇತರೆ ನಿಬಂಧನೆಗಳು:

(1) ಈ ಬಡ್ಡಿ ಸಹಾಯಧನವು ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ವರ್ಗದ ಉದ್ದಿಮೆದಾರರಿಗೆ ನೀಡುವ ಅವಧಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ. ಇತರೆ ಚಟುವಟಿಕೆಗಳು ಅಂದರೆ, ಕಟ್ಟಡ ನಿರ್ಮಾಣ, ಸಾರಿಗೆ ವಾಹನಗಳ ಖರೀದಿಗೆ. ಈ ಯೋಜನೆಯಲ್ಲಿ ಅನ್ವಯವಾಗುವುದಿಲ್ಲ.

(2) ಈ ಬಡ್ಡಿ ಸಹಾಯಧನವು ಹೂಡಿಕೆ ಬಂಡವಾಳ ಹಾಗೂ ಸ್ಥಿರಾಸ್ತಿ ಅಂದರೆ ಭೂಮಿ, ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಖರೀದಿಸಲು ಮಾತ್ರ ಅನ್ವಯವಾಗುತ್ತದೆ. ಹಾಗೂ ಈ ಅವಧಿ ಸಾಲವು ಏಕಮುಖ ಯೋಜನೆಯಾಗಿರುತ್ತದೆ. ಹೆಚ್ಚುವರಿ ಹೂಡಿಕೆ ಮೊತ್ತಕ್ಕೆ ಹಾಗೂ ಇತರೆ ಸಾಲಕ್ಕಾಗಿ ಹೆಚ್ಚುವರಿ ಹಣ ಬೇಕಾದಲ್ಲಿ ಹಾಗೂ ಇತರರಿಗೆ ಈ ಅವಧಿ ಸಾಲದ ಮೇಲಿನ ಬಡ್ಡಿ ಸಹಾಯಧನ ಅನ್ವಯವಾಗುವುದಿಲ್ಲ. ಈ ಯೋಜನೆಯಡಿ ಈಗಾಗಲೇ ಸಾಲ ಪಡೆದಿದ್ದರೆ, ಅಂತಹ ಫಲಾನುಭವಿಗಳಿಗೆ ಹೆಚ್ಚುವರಿ ಸಾಲವನ್ನು ಈ ಯೋಜನೆಯಡಿ ಪಡೆಯಲು ಅವಕಾಶವಿರುವುದಿಲ್ಲ.

(3) ಈ ಯೋಜನೆಯಡಿ ರಾಜ್ಯ ಸರ್ಕಾರ / ಕೇಂದ್ರ ಸರ್ಕಾರದಿಂದ ಈಗಾಗಲೇ ಘಟಕ ಪ್ರಾರಂಭಿಸಲು ಬಡ್ಡಿ ಸಹಾಯಧನ ಪಡೆದಿದ್ದಲ್ಲಿ ಅಂತಹದವರಿಗೆ ಈ ಯೋಜನೆಯಡಿ ಅವಕಾಶವಿರುವುದಿಲ್ಲ. ಹೀಗಿದ್ದರೂ ಸ್ಥಿರಾಸ್ತಿಯ ಮೇಲೆ ಹೂಡುವ ಬಂಡವಾಳ ಸಹಾಯಧನಕ್ಕೆ ಹಾಲಿ ಇರುವ ನೀತಿ ಮತ್ತು ನಿಯಮಕ್ಕೆ ಅನುಸಾರ ಬಡ್ಡಿ ಸಹಾಯಧನ ಯೋಜನೆಯಲ್ಲಿ ಅವಕಾಶವಿರುತ್ತದೆ.

(4) ಇತರೆ ಸಾಲ ನೀಡುವ ಷರತ್ತುಗಳು ಅಂದರೆ : ಉದ್ದಿಮೆದಾರರ ಬಂಡವಾಳ, Debt equity ratio, Security requirement ಮತ್ತು ಇತರೆ ಉದ್ದಿಮೆದಾರರಿಗೆ ಕ.ರಾ.ಹ.ಸಂಸ್ಥೆಯ ಮೂಲಕ ಬೇಕಾದಂತಹ ಸಾಲವನ್ನು ಫಲಾನುಭವಿಗೆ ಕ.ರಾ.ಹ.ಸಂಸ್ಥೆಯವರು ಯೋಜನೆಯನ್ನು ಪರಿಶೀಲಿಸಿ ಇದರ ಸಾಂದ್ರತೆ ಆರ್ಥಿಕ ಸಮಂಜಸದ ಬಗ್ಗೆ ದೃಢೀಕರಿಸಿಕೊಂಡು ಯೋಜನೆಯನ್ನು ಅನುಮೋದಿಸುವುದು ಹಾಗೂ ನಿಗದಿತ ಅವಧಿಯೊಳಗೆ ವಸೂಲಿ ಮಾಡಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಕ.ರಾ.ಹ.ಸಂಸ್ಥೆಯದ್ದಾಗಿರುತ್ತದೆ. ರಾಜ್ಯ ಹಣಕಾಸು ಸಂಸ್ಥೆಯೇ ನಿಯಮಾನುಸಾರ Security/Guarantee ಪಡೆದು ಸಾಲ ಮಂಜೂರು ಮಾಡಲು ಕ್ರಮ ವಹಿಸತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ / ಜವಾಬ್ದಾರರಲ್ಲ.

(5) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ನೀಡುವ ಬಡ್ಡಿ ಸಹಾಯಧನ ಯೋಜನೆ ಅಡಿಯಲ್ಲಿ ಕ.ರಾ.ಹ.ಸಂಸ್ಥೆಯವರು ಜಿಲ್ಲಾ ಮಟ್ಟದಲ್ಲಿ ಮಹಿಳಾ ಉದ್ದಿಮೆದಾರರನ್ನು ಆಯ್ಕೆ ಮಾಡುವಾಗ ಕ.ರಾ.ಹ.ಸಂಸ್ಥೆಯ ಶಾಖಾ ವ್ಯವಸ್ಥಾಪಕರ ಅಧ್ಯಕ್ಷತೆಯ ಸಮಿತಿಯಲ್ಲಿ ಆಯಾ ಜಿಲ್ಲೆಯ ಲೀಡ್ ಬ್ಯಾಂಕಿನ ವ್ಯವಸ್ಥಾಪಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಮ.ಮ.ಅ.ಇ., ಹಾಗೂ ಕ.ರಾ.ಮ.ಅ.ನಿಗಮದ ಅಭಿವೃದ್ಧಿ ನಿರೀಕ್ಷಕರು ಆಯ್ಕೆ ಸಮಿತಿಯ ಸದಸ್ಯರಾಗಿರತಕ್ಕದ್ದು. ಸಮಿತಿ ನಿಯಮಾನುಸಾರ ನಿಗದಿತ ಮಾನದಂಡಗಳನ್ನು ಪೂರೈಸಿದ ಹಾಗೂ Security/Guaranteeಯನ್ನು ಖಾತ್ರಿಪಡಿಸಿಕೊಂಡು ಆಯ್ಕೆ ಮಾಡಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದ ಮಂಜೂರಾತಿ/ಅನುಮೋದನೆ ಪಡೆಯತಕ್ಕದ್ದು. ಫಲಾನುಭವಿಯು ಯಾವುದೇ ರೀತಿಯಲ್ಲಿ ನಷ್ಟ ಹೊಂದಿದಲ್ಲಿ ಅಥವಾ ಸಾಲ ಮರುಪಾವತಿಸದಿದ್ದಲ್ಲಿ ಸರ್ಕಾರ ಅಥವಾ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಹೊಣೆಯಾಗುವುದಿಲ್ಲ / ಜವಾಬ್ದಾರರಲ್ಲ.

(6) ಕ.ರಾ.ಹ.ಸಂಸ್ಥೆಯವರು ಅವಧಿ ಸಾಲ ಮಂಜೂರಾದ ಮಹಿಳಾ ಉದ್ದಿಮೆದಾರರಿಗೆ ಸಾಲ ಬಿಡುಗಡೆಯಾದ ನಂತರ ಇವರ ಪಟ್ಟಿಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ಕಳುಹಿಸಿ ಬಡ್ಡಿ ಸಹಾಯಧನದ ಬಿಡುಗಡೆಗೆ ಕೋರಿಕೆ ಪತ್ರ ಸಲ್ಲಿಸಿದ ನಂತರ ಹಣ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತದೆ. ಪರಿಷ್ಕೃತ ಆದೇಶದನ್ವಯ ಸಾಲದ ಗಾತ್ರವು ರೂ.5.00ಲಕ್ಷಗಳಿಂದ ಗರಿಷ್ಠ ರೂ.2.00 ಕೋಟಿಗಳವರೆಗೆ ದಿನಾಂಕ: 12.05.2017ರ ನಂತರ ಮಂಜೂರಾದ ಸಾಲಗಳಿಗೆ ಅನ್ವಯವಾಗುತ್ತದೆ.

(7) ಪ್ರತಿ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಕೋರುವ ಸಮಯದಲ್ಲಿ, ತ್ರೈಮಾಸಿಕದಲ್ಲಿ ಮಂಜೂರು ಮಾಡಿದ ಸಾಲದ ಮೊತ್ತ ಹಾಗೂ ಈ ಹಿಂದೆ ಮಾಡಿದ ಸಾಲದ ಮರುಪಾವತಿಯ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/7/2017
(ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
2. ಮಹಾಲೇಖಪಾಲರು, (ಇಆರ್‌ಎಸ್‌ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
3. ಮಹಾಲೇಖಪಾಲರು, (ಎ & ಇ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಕರ್ನಾಟಕ, ಬೆಂಗಳೂರು-01.
4. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
8. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
9. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ-1, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14. ಶಾಖಾಧಿಕಾರಿ, ಸ್ವೀಮರ ಶಾಖೆ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಒ.ಡಿ.ಜಿ.ಸಿ/ಸೂಚನಾ ಫಲಕ/ಹೆಚ್ಚುವರಿ ಪ್ರತಿಗಳು.

ಅನುಬಂಧ-2

**KARNATAKA STATE FINANCIAL CORPORATION**
**HEAD OFFICE**
**PROPOSED OFFICEWISE SANCTION LIMITS FOR**
**WOMEN ENTREPRENEURS SCHEME FOR THE FY.2017-18**

| SL. NO. | NAME OF THE DISTRICT | PROPOSED TARGET FOR 2017-18 (Rs. in lakhs) |
|---|---|---|
| 1 | JAYANAGAR | 2000.00 |
| 2 | RAJAJINAGAR | 1100.00 |
| 3 | M G ROAD | 900.00 |
| 4 | BENGALURU RURAL | 1400.00 |
| 5 | RAMANAGAR | 450.00 |
| 6 | TUMAKURU | 1100.00 |
| 7 | KOLAR | 600.00 |
| 8 | CHICKBALLAPUR | 400.00 |
| | | **7950.00** |
| 1 | MYSURU | 1600.00 |
| 2 | MANDYA | 450.00 |
| 3 | MADIKERI | 300.00 |
| 4 | CHAMARAJANAGAR | 200.00 |
| 5 | MANGALURU | 800.00 |
| 6 | UDUPI | 300.00 |
| 7 | HASSAN | 450.00 |
| 8 | CHICKMAGALURU | 200.00 |
| | | **4300.00** |
| 1 | HUBBALLI | 1500.00 |
| 2 | HAVERI | 300.00 |
| 3 | GADAG | 300.00 |
| 4 | KOPPAL | 600.00 |
| 5 | KARWAR | 200.00 |
| 6 | BALLARI | 700.00 |
| 7 | DAVANGERE | 600.00 |
| 8 | CHITRADURGA | 400.00 |
| 9 | SHIVAMOGGA | 400.00 |
| | | **5000.00** |
| 1 | KALBURGI | 500.00 |
| 2 | YADGIR | 200.00 |
| 3 | RAICHUR | 200.00 |
| 4 | BIDAR | 200.00 |
| 5 | BELGAVI | 700.00 |
| 6 | VIJAYAPURA | 500.00 |
| 7 | BAGALKOT | 450.00 |
| | | **2750.00** |
| | **TOTAL** | **20000.00** |